

# ಕಲಿಯಬೇಕಾದ ಬದುಕಿನ ಪಾಠ

■ ಸಂತೆಬೆನ್ನೂರು ಫೈಜ್ನಟ್ರಾಜ್

ಕಾಫಿಗೆಂದು ಫ್ರಿಜ್ಜೊಳಗೆ ಚಳಿಗೆ ನಡುಗ್ತಿದ್ದ, ತಲೆ ಕತ್ತರಿಸಿಕೊಂಡಿದ್ದ ನಂದಿನಿಯನ್ನು (ಪ್ಯಾಕೆಟ್) ತಲೆ ಹಿಡಿದು ಹೊರಗೆಳೆದು, ಕೈ ಬಟ್ಟಲಿಗಿಷ್ಟು ಸುರಿದು 'ನಡಿ ತಾಯಿ ಒಳಗೆ' ಅಂದು ಸೈರನ್ ಕೂಗುವುದರಲ್ಲಿದ್ದ ಫ್ರಿಜ್ಜಪ್ಪನ ಬಾಗಿಲು ಮೆಲ್ಲನೆ ಮುಚ್ಚಿದೆ.

ಕೈಬಟ್ಟಲು ಸ್ಟೌ ತಲೆ ಮೇಲಿಟ್ಟು ಇನ್ನೂ ಮಲಗೇ ಇದ್ದ ಹೆವಿ ಇದ್ರೂ ಲೈಟರ್ ಅನಿಸಿಕೊಂಡ ಆಸಾಮಿನ ಎಳೆದು ಒತ್ತಿದೆ... ಎಲ್ಲಿತ್ತೋ ಬೆಂಕಿ, ವಜ್ರಮುನಿಯ ಕಣ್ಣಂತೆ ಕೆಂಪಾಗಿ ಉರಿಯತೊಡಗಿತು!

ಹೆಸರಷ್ಟೇ ಸಿಹಿ, ಬಹುಜನರ ಪಾಲಿಗೆ ಕಹಿಯಾಗಿರೋ ಸಕ್ಕರೆ ಡಬ್ಬ ಆಕಳಿಸ್ತಿತ್ತು. ತೆರೆದ ಬಾಯಿಗೆ ಚಮಚ ಹಾಕಿ ಎರಡು ಬಾರಿ ಹಾಲಿಗೆ ಹಾಕಿ ಅದರ ಬಾಯಿ ಮುಚ್ಚಿ ಯಥಾ ಸ್ಥಾನದಲ್ಲಿಟ್ಟೆ. ಹಾಲೆಂಬ ಹಾಲು ಸಂಪತ್ತಿಗೆ ಸವಾಲ್‌ನ ಭದ್ರನಂತೆ ಕುದಿಕುದಿದು ಬಂತು.

'ಹೇಳಿ ಬಾಸ್' ಅನ್ನಂಗ್ ನಾಟಕ ಮಾಡ್ಕೊಂತ ಈಗಾಗಲೇ ಕೈಲಿದ್ದ ಪಿಂಗಾಣಿ ಲೋಟಕ್ಕಿಷ್ಟು ಎರಡು ರೂಪಾಯಿಗೆ ನಮ್ಮನೆ ಬಂದಿದ್ದ ಕಾಫಿ ಪುಡಿ ಸ್ಯಾಷೆ ತಲೆ ಮೂಲೆ ಕತ್ತರಿಸಿ ಒಂದಿಷ್ಟು ಕೊಡವಿ ಸಂಜೆಗಿರಲಂತ ಮಡಚಿ ಜೀರಿಗೆ ಮತ್ತು ಏಲಕ್ಕಿ ಡಬ್ಬಗಳ ಮಧ್ಯೆ ಸಿಕ್ಕಿಸಿದೆ. (ಅವರಿಬ್ಬರಿಗೆ ಅದೇನಿತ್ತೋ ಅಫೇರು, ಜಾಗಾನೇ ಬಿಡ್ತಿರಲಿಲ್ಲ!)

ಕುದ್ದ ಹಾಲಿಗೂ ಕಾಫಿ ಪುಡಿಗೂ ಜಗಳಕ್ ಬಿಡಂಗೆ ಲೋಟಕ್ ಹಾಲು ಹಾಕಿ ಮ್ಯಾಲೆ ಕೆಳಗೆ ಮಾಡಿದೆ. ಅದೇನ್ ಸಿಟ್ಟಿತ್ತೋ... ಏನೋ ಒಂದಾಗಿದ್ದ ಹಾಲು ಬಭ್ರುವಾಹನನ ಕೈಯ ಬಾಣ ಒಂದಕ್ ನೂರಾಗಂಗೆ ಒಡೆದು ಚೂರ್ ಚೂರಾಗಿ ಕಾಫಿನ ಕೆಣಕಿತ್ತು!

ಕಾಫಿ ಸೋತು ಹುಳಿ ವಾಸನೆ ಕೊರೊನಾ ಸುದ್ದಿಯಂತೆ ಅಡುಗೆ ಮನೆ ತುಂಬಾ ವ್ಯಾಪಿಸಿ ಯುದ್ಧ ಸೋತ ಸೇನಾನಿಯ ಹಾಗೆ ನಾ ಹುಳಿ ಕಾಫಿ ಹಿಡಿದು ಯೋಚನೆಗೆ ಬಿದ್ದೆ!

ಕಾಫಿ ಚೆಲ್ಲೋಣ, ಬೇರೆ ಹಾಲಲ್ ಮತ್ ಮಾಡೋಣ, ಆದರೆ ಅದಲ್ಲ, ಈಗಾಗಲೇ ಹಾಲು ನಷ್ಟ, ಸಕ್ಕರೆ ನಷ್ಟ, ಕಾಫಿಪುಡಿ ನಷ್ಟ, ಗ್ಯಾಸ್ ನಷ್ಟ ಇವೆಲ್ಲಕ್ಕಿಂತ ಮಾನವ ಶಕ್ತಿ, ಶ್ರಮ ನಷ್ಟ.

ಅಂದರೆ ಒಂದರ ಕೊರತೆಯಿಂದ ಜೊತೆಯ ಎಲ್ಲವೂ ಶರಣಾಗಿ ಅದೇ ದಾರಿ ತುಳಿಯುವರು.

ನೀತಿ: ನಮ್ಮ ಜೊತೆಯವರಲ್ಲಿ ಒಬ್ಬರು ಕೆಟ್ಟರೂ ನಮ್ಮೆಲ್ಲರಿಗೆ ಕೆಟ್ಟ ಹೆಸರು ಮತ್ತು ಸಮಾಜ ನಮ್ಮನ್ನು ನೋಡುವ ದೃಷ್ಟಿ ಕೋನ ಬದಲಾಗುತ್ತೆ. ಹಾಗಾಗಿ ಎಲ್ಲರೂ ಚೆನ್ನಾಗಿರೋಣ! ■

